# ಕೂಗಾಡುವುದೇ ಬಿಗ್‌ಬಾಸ್ ಗೆಲುವಲ್ಲ

## ಸೂರಜ್ ವಿ.ಆರ್. ಸಿಂಗ್

ಕಲರ್ಸ್ ಕನ್ನಡದ 'ಪವಿತ್ರ ಬಂಧನ' ದೇವದತ್ ದೇಶಮುಖ್

■ ರಾಘವೇಂದ್ರ ಕೆ.

◆ **ವಿದೇಶದಲ್ಲಿ ಓದಿ ಬಂದು, ನಟನೆಗೆ ಒಲಿದಿದ್ದು ಹೇಗೆ?**

ಹುಟ್ಟಿದ್ದು ಮಡಿಕೇರಿ, ಬೆಳೆದಿದ್ದು ಮೈಸೂರು. ಎಂಜಿನಿಯರಿಂಗ್ ಓದಿದೆ. ಐಟಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದೆ. ಕೆಲಸ ಮಾಡುತ್ತಿದ್ದಾಗ ಅಕ್ಕ ಧನ ಸಹಾಯ ಮಾಡಿ ಕೆನಡಾಕ್ಕೆ ಉನ್ನತ ವ್ಯಾಸಂಗ ಮಾಡಲು ಕಳಿಸಿದರು. ಅಕ್ಕನ ಮದುವೆಗೆ ಬಂದವನು, ಕೆಲಸವನ್ನು ಹುಡುಕಿಕೊಂಡು ಕೆನಡಾಕ್ಕೆ ಮತ್ತೆ ಹೋದೆ. ಮನೆಯಲ್ಲಿ ಅಮ್ಮ ಒಬ್ಬರೆ ಇದ್ದಾರೆ ಎನ್ನುವ ನೋವು ಕಾಡುತ್ತಿತ್ತು. ಅಷ್ಟರಲ್ಲಿ ಕೆನಡಾದ ಕಂಪನಿಯೊಂದು ಬೆಂಗಳೂರಿನಲ್ಲಿ ನೇಮಕಾತಿ ನಡೆಸಿತ್ತು. ಕೆಲಸ ಸಿಕ್ಕಿತೆಂದು ಮೈಸೂರಿಗೆ ಬಂದೆ. ಕೆಲಸ ರಾತ್ರಿ ಪಾಳಿ ಇರುತ್ತಿತ್ತು. ಹಗಲು ಸಾಮಾಜಿಕ ಮಾಧ್ಯಮದಲ್ಲಿ ಕಂಟೆಂಟ್ ಕ್ರಿಯೇಟ್, ಫಿಟ್ನೆಸ್ ತರಬೇತಿ ಆರಂಭಿಸಿದೆ. ಪ್ರಮೋಷನ್ ವಿಡಿಯೊ ಕೂಡ ಮಾಡುತ್ತಿದ್ದೆ. ಈ ಎಲ್ಲ ಕೆಲಸದಿಂದ ತುಂಬ ಒತ್ತಡ ಆಗುತ್ತಿತ್ತು. ಹಾಗಾಗಿ ಕೆಲಸವನ್ನು ಬಿಟ್ಟೆ.

◆ **ಕಿರುತೆರೆಗೆ ನೀವು ತೆರೆದುಕೊಂಡಿದ್ದು ಹೇಗೆ?**

ಕೆಲಸ ಬಿಟ್ಟು ತಪ್ಪು ಮಾಡಿದ್ನಾ ಎಂದು ಯೋಚನೆ ಮಾಡುತ್ತಿದ್ದೆ. ಅಷ್ಟರಲ್ಲಿ 'ಬಿಗ್ ಬಾಸ್' ತಂಡದಿಂದ ಇನ್‌ಸ್ಟಾಗ್ರಾಂ ನೋಡಿ ಮೆಸೇಜ್ ಬರುತ್ತದೆ. ಒಬ್ಬರು ನಂಬರ್ ತೆಗೆದುಕೊಂಡು ಮಾತನಾಡುತ್ತಾರೆ. ಕಲರ್ಸ್ ತಂಡದ ಜೊತೆ ಮತ್ತೆ ಮತ್ತೆ ಮಾತುಕತೆ, ಭೇಟಿ ಮುಂದುವರಿಯುತ್ತದೆ. ಇದರಿಂದ 'ಬಿಗ್ ಬಾಸ್' ಭರವಸೆ ಹೋಗುತ್ತದೆ. ಕೊನೆಗೆ ಎರಡೇ ದಿನ ಸಮಯ ಕೊಟ್ಟು ವೈಲ್ಡ್ ಕಾರ್ಡ್ ಪ್ರವೇಶಕ್ಕೆ ಅವಕಾಶ ಸಿಗುತ್ತದೆ. ಆಗ ಕೆಲಸ ಬಿಟ್ಟಿದ್ದನ್ನು ಅಮ್ಮನಿಗೆ ಹೇಳಿದೆ. 'ಬಿಗ್ ಬಾಸ್' ನಂತರ ಏನು ಎನ್ನುವ ಪ್ರಶ್ನೆ ಅಮ್ಮನಿಗೆ ಕಾಡಿತು. ಸ್ಪರ್ಧಿಯಾಗುವೆ ಎಂದು ಆತ್ಮೀಯರಿಗೂ ಮಾಹಿತಿ ನೀಡಲು ಆಗದಷ್ಟು ತರಾತುರಿಯಲ್ಲಿ ಹೋದೆ. 'ಬಿಗ್ ಬಾಸ್' ಮನೆಯಿಂದ ಹೊರ ಬರುತ್ತಿದ್ದಂತೆಯೇ ದೇವದತ್ ದೇಶಮುಖ್ ಪಾತ್ರಕ್ಕೆ ಆಯ್ಕೆ ಮಾಡಿದರು.

ಆಗುತ್ತಿರುವುದೆಲ್ಲ ಒಳ್ಳೆಯದಕ್ಕೆ ಎನ್ನುವುದು ನನ್ನ ನಂಬಿಕೆ. ಯಾವುದೇ ಅವಕಾಶ ಸಿಕ್ಕರೂ ಅದನ್ನು ಸರಿಯಾಗಿ ಬಳಸಬೇಕು. ಯಾವುದೇ ಕೆಲಸವನ್ನು ಮನಪೂರ್ವಕವಾಗಿ ಮಾಡಬೇಕು. 'ಪವಿತ್ರ ಬಂಧನ' ತಂಡವೇ ಧೈರ್ಯ ತುಂಬಿದ್ದರಿಂದ ಒಪ್ಪಿಕೊಂಡೆ. ಮರುದಿನವೇ ಚಿತ್ರೀಕರಣ ಆರಂಭವಾಯಿತು. ಇದು ಮೊದಲ ಅನುಭವ. 'ಬಿಗ್ ಬಾಸ್'ನಿಂದ ಬಂದ ಮೇಲೆ ನಿದ್ದೆಯನ್ನೂ ಸರಿಯಾಗಿ ಮಾಡಿಲ್ಲ.

◆ **ನಿಮ್ಮ ಪಾತ್ರದ ಬಗ್ಗೆ ಏನು ಹೇಳುತ್ತೀರಿ?**

ಅಮ್ಮನ ಜೊತೆ ಸೇರಿ ಅನುಸ್ ಕಿಚನ್ ಮಾಡಿದ್ದೇನೆ. ಸೀರಿಯಲ್‌ನಲ್ಲಿ ಅಮ್ಮಾಸ್ ಕಾಫಿ ಇದೆ. ಆಡಿಷನ್‌ನಲ್ಲಿಯೂ ಇಂತಹದ್ದೇ ಒಂದು ಸಂದರ್ಭ ಕೊಡುತ್ತಾರೆ. ಕಿರುತೆರೆಯ ವ್ಯಾವಹಾರಿಕ ತಿಳಿವಳಿಕೆಯಾಗಲಿ ಕ್ಯಾಮೆರಾ ಎದುರಿಸುವ ತಂತ್ರವಾಗಲಿ ಗೊತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿಯೂ ಪ್ರಧಾನ ಪಾತ್ರಕ್ಕೆ ಆಯ್ಕೆ ಆದೆ. ವಾಸ್ತವದಲ್ಲಿ ನಾನು ಒಂದು ರೆಸ್ಟೋರೆಂಟ್ ಮಾಡಬೇಕು ಎನ್ನುವ ಯೋಚನೆಯಲ್ಲಿದ್ದೆ. ಅಮ್ಮನ ಜೊತೆ ಹೋಟೆಲ್ ಉದ್ಯಮಕ್ಕೆ ಕಾಲಿಡುವ ಕನಸು ಇತ್ತು. ಆದರೆ, ಸಡನ್ ಜೀವನ ಇಂತಹ ತಿರುವು ಪಡೆಯಿತು. ಎಲ್ಲವೂ ಅನಿರೀಕ್ಷಿತವಾಗಿ ಸಾಗುತ್ತಿದೆ.



◆ **ಸಾಮಾಜಿಕ ಮಾಧ್ಯಮದಲ್ಲಿ ಲೇಡಿ ಫಾಲೋವರ್ಸ್ ಜಾಸ್ತಿ ಆಗಿದ್ದಾರಂತೆ ಹೌದಾ?**

ಸಾಮಾಜಿಕ ಮಾಧ್ಯಮಗಳಲ್ಲಿ ಸಾವಿರಾರು ಪ್ರತಿಕ್ರಿಯೆ ಬರುತ್ತವೆ. ಅದರಲ್ಲಿ ಒಂದೇ ಒಂದು ನೆಗೆಟಿವ್ ಅಭಿಪ್ರಾಯ ಬಂದಿಲ್ಲ. ಚಿಕ್ಕಮಕ್ಕಳಿಂದ ಹಿಡಿದು ಹಿರಿಯ ಜೀವಗಳೂ ಪ್ರೀತಿಸುತ್ತಿವೆ. ಅದರಲ್ಲಿ ಹುಡುಗಿಯರೂ ಇದ್ದಾರೆ. ಅದು ಗೊತ್ತಿರುವ ವಿಚಾರ, ಹ್ಹಹ್ಹಹ... ಮಕ್ಕಳು ಸೂರಜ್ ಟೀವಿಯಲ್ಲಿ ಬರ್ತಿಲ್ಲ ಎಂದು ಶಾಲೆಗೆ ಹೋಗಲ್ಲ ಅಂದಿದ್ದನ್ನೂ ಕೇಳಿದ್ದೇನೆ. ಕೆಲ ಮಕ್ಕಳು ನಮ್ಮ ಮನೆಗೆ ಬಂದಿದ್ದಾರೆ. ಅಣ್ಣ ಆಟೊಗ್ರಾಫ್ ಎಂದು ತಮ್ಮ ಪ್ಯಾಂಟ್ ಮೇಲೆ ಸಹಿ ಹಾಕಿಸಿಕೊಂಡು ಹೋಗಿದ್ದಾರೆ. ಒಟ್ಟಾರೆ ಒಳ್ಳೆಯ ಅಭಿಪ್ರಾಯ ಬಂದಿದೆ.

◆ **'ಬಿಗ್ ಬಾಸ್' ಅನುಭವ ಹೇಗಿತ್ತು? ಈಜುಕೊಳದ ಶೃಂಗಾರದ ವಿಶೇಷ ಏನು?**

'ಬಿಗ್ ಬಾಸ್' ಹೇಗಿತ್ತು ಎಂದರೆ, ಅನೇಕರು ಪ್ಲಾನ್ ಮಾಡಿಕೊಂಡು ಸ್ಟ್ರಾಟಜಿಯಿಂದ ಆಡಿರಬಹುದು. ಮೂರು ತಿಂಗಳು ಹೀಗೆ ಇರಬೇಕು ಎಂದು ಯೋಚನೆ ಮಾಡಿರುತ್ತಾರೆ. ನನಗೆ ಯೋಚನೆ ಮಾಡಲು ಸಮಯ ಇರಲಿಲ್ಲ ಇದ್ದರೂ ಒಂದು ವಾರಕ್ಕೆ ಹೋಗಿರುತ್ತಿತ್ತು. ಈಗ ಇಲ್ಲಿ ಹೇಗಿದ್ದೇನೋ ಅಲ್ಲೂ ಹಾಗೆಯೇ ಇದ್ದೆ. ಇಲ್ಲಿ ನನ್ನನ್ನು ಭೇಟಿ ಆಗುವವರು ಹಾಗೆಯೇ ಹೇಳುತ್ತಾರೆ. ಕೆಲವರು 'ಬಿಗ್ ಬಾಸ್' ಅಂದರೆ ಟಾಸ್ಕ್, ಕ್ಯಾಪ್ಟನ್ ಗೆಲುವು ಅಂದುಕೊಳ್ಳುತ್ತಾರೆ. ಕ್ಯಾಪ್ಟನ್ ನಾನು ಆಗಲೇ ಇಲ್ಲ. ತುಂಬ ಪ್ರಯತ್ನ ಮಾಡಿದರೂ ಆ ಗುರಿ ಮುಟ್ಟಲಿಲ್ಲ. ಕೊನೆಯ ಹಂತದವರೆಗೂ ಆಡಿದ್ದೇನೆ. ಜೋರಾಗಿರಬೇಕು, ಕೂಗಾಡುವ ಅಗತ್ಯ ಇಲ್ಲ. ಆ ಪ್ರಕ್ರಿಯೆಯನ್ನು ಖುಷಿಯಿಂದ ಅನುಭವಿಸಿದೆ. ರಿಯಾಲಿಟಿ ಶೋಗಳಲ್ಲಿಯೇ ಇದು ತುಂಬ ಕ್ಲಿಷ್ಟಕರ ಹೋರಾಟ.

ಸೂರಜ್ ಪ್ರವೇಶ ಭಿನ್ನವಾಗಿ ಇರಲಿ ಎಂದು ಈಜುಕೊಳದಲ್ಲಿ 'ಬಿಗ್ ಬಾಸ್' ಇಳಿಸಿದರು. ಉಳಿದಿದ್ದು ನನಗೆ ತಿಳಿದಂತೆ ಮಾಡಿದೆ. ಆ ದೃಶ್ಯ ಹೀಗೆ ಬಂದಿದೆ ಎಂದು ನನಗೆ ಗೊತ್ತಿರಲಿಲ್ಲ. ಮೈಕ್ ಒದ್ದೆ ಆಗುತ್ತೆ ಎಂದು ಸ್ಪರ್ಧಿಗಳು ಹೇಳುತ್ತಾರೆ. ನಾನು ಅಂಗಿ ತೆಗೆದು ಹಿಂಡುವ, ಸ್ಪರ್ಧಿಗಳ ಜೊತೆ ನಡೆಸುವ ಮಾತುಕತೆ ಕೂಡ ಅದ್ಭುತವಾಗಿತ್ತು. ಎಲ್ಲರನ್ನೂ ಸ್ವಾಗತಿಸುತ್ತೇನೆ. ಕೊಳಕ್ಕೆ ಧುಮುಕಿ ಎನ್ನುತ್ತೇನೆ, ಅದೆಲ್ಲ ಸಹಜವಾಗಿ ಮೂಡಿಬಂದಿದೆ. ■